ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 259 (329)
2) ಸದಸ್ಯರ ಹೆಸರು : ಶ್ರೀ ಜಿ.ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸುವ ದಿನಾಂಕ : 17.07.2019
4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿರುವ ಅರಣ್ಯ ವಸತಿ ಗೃಹಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಅಗತ್ಯ ಮೂಲಸೌಕರ್ಯ ಒದಗಿಸಲಾಗಿದ ವಸತಿ ಗೃಹಗಳ ಸಂಖ್ಯೆ ಎಷ್ಟು;	ರಾಜ್ಯದಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿ ಒಟ್ಟು 171 ಅರಣ್ಯ ವಸತಿ ಗೃಹಗಳು ಇದ್ದು, ವೃತ್ತವಾರು ಪಟ್ಟಿಯ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. ಎಲ್ಲಾ ವಸತಿ ಗೃಹಗಳಿಗೆ ಅಗತ್ಯ ಮೂಲಭೂತ ಸೌಕರ್ಯವನ್ನು ಒದಗಿಸಲಾಗಿರುತ್ತದೆ.
(ಆ)	ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ ಅರಣ್ಯ ವಸತಿ ಗೃಹದ ಕಾರ್ಯಕಲ್ಪಕ್ಕೆ ಹಾಗೂ ಮೂಲಸೌಕರ್ಯ ಒದಗಿಸಲು ಅರಣ್ಯ ಇಲಾಖೆ ಪ್ರಸಕ್ತ ವರ್ಷ ಮೀಸಲಿಟ್ಟಿರುವ ಅನುದಾನ ಎಷ್ಟು; (ಮಾಹಿತಿ ನೀಡುವುದು)	2019-20ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ಜೋಗಿ ಮಟ್ಟಿ ಅರಣ್ಯ ವಿಶ್ರಾಂತಿ ಗೃಹಕ್ಕೆ ಪ್ರಸಕ್ತ ಸಾಲಿಗೆ ರೂ.3.00 ಲಕ್ಷ ಅನುದಾನ ಮೀಸಲಿಡಲಾಗಿದೆ.
(ಇ)	2018-19ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ಅರಣ್ಯ ಇಲಾಖೆ ವತಿಯಿಂದ ನಡೆಸಲಾಗಿರುವ ಗಿಡಗಳ ಸಂಖ್ಯೆ ಎಷ್ಟು; ಅದಕ್ಕೆ ವ್ಯಯಿಸಲಾದ ಅನುದಾನ ಎಷ್ಟು? (ಮಾಹಿತಿ ನೀಡುವುದು)	2018-19ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ಅರಣ್ಯ ಇಲಾಖೆ ವತಿಯಿಂದ ನೆಡಲಾಗಿರುವ ಗಿಡಗಳ ಸಂಖ್ಯೆ ಮತ್ತು ಅದಕ್ಕೆ ವ್ಯಯಿಸಲಾದ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ;

ಕ್ರ ಸಂ	ವಿಭಾಗ/ಜಿಲ್ಲೆ	ನೆಡಲಾಗಿರುವ ಗಿಡಗಳ ಸಂಖ್ಯೆ	ಭರಿಸಿದ ವೆಚ್ಚ (ರೂ. ಲಕ್ಷಗಳಲ್ಲಿ)
1	ಚಿತ್ರದುರ್ಗ(ಪ್ರಾ)	5.888 ಲಕ್ಷ	122.412
2	ಚಿತ್ರದುರ್ಗ(ಸಾ.ಅ)	1.011 ಲಕ್ಷ	142.137
	ಒಟ್ಟು:	6.899 ಲಕ್ಷ	264.549

ಸಂಖ್ಯೆ: ಅಪಜೀ 22 ಎಫ್‌ಟಿಎಸ್ 2019

(ಸತೀಶ್ ಎಲ್. ಜಾರಕಿಹೊಳಿ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಅನುಬಂಧ–1		
ಅರಣ್ಯ ಇಲಾಖೆಯ ಅಧೀನದಲ್ಲಿರುವ ಅರಣ್ಯ ವಿಶ್ರಾಂತಿ ಗೃಹಗಳ ಪಟ್ಟಿ		
ಕ್ರ ಸಂ	ವೃತ್ತ	ಅರಣ್ಯ ವಿಶ್ರಾಂತಿ ಗೃಹಗಳ ಸಂಖ್ಯೆ
1	ಬೆಂಗಳೂರು	10
2	ಬಳ್ಳಾರಿ	13
3	ಬೆಳಗಾವಿ	12
4	ಚಾಮರಾಜನಗರ	8
5	ಚಿಕ್ಕಮಗಳೂರು	15
6	ಧಾರವಾಡ	7
7	ಕಲಬುರಗಿ	12
8	ಹಾಸನ	10
9	ಕೆನರಾ	34
10	ಕೊಡಗು	8
11	ಮಂಗಳೂರು	25
12	ಮೈಸೂರು	3
13	ಶಿವಮೊಗ್ಗ	14
ಒಟ್ಟು		**171**

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಎಸ್‌ಎಫ್‌ಎಪಿ–ಬಿವಿಆರ್), ಬೆಂಗಳೂರು.